

ಕೆಲವು ಬಿಳಿ. ಕರಿ ಮೋಡಗಳು ಬಾನೆಲ್ಲವ ಮುಸುಕಲಿ, ವರ್ಷಧಾರೆಯಾಗಿ ಬಹು ಬೇಗನೆ ಅಲ್ಲಿಂದ ಇಳಿದು ನನ್ನ ಮೈ ತುಂಬಲಿ ಎಂದು ಆಶಿಸುತ್ತಾ ಆಸೆ ಕಂಗಳಿಂದ ಮತ್ತೆ ಮತ್ತೆ ಮೇಲ್ನೋಡುತ್ತಿತ್ತು ನದಿ.

ಅದೊಂದು ದಿನ ಅಜ್ಜ ಅಜ್ಜಿ, ತಂದೆ ತಾಯಿಯ ನೆನಪಲ್ಲಿ ಮುಳುಗಿದ್ದ ಚೋಂಗನಿಗೆ ಹೊಳೆ ಆಚೆ ದಡದಲ್ಲಿ ಕೇಳುತ್ತಿದ್ದ ಮಾತಿನ ಶಬ್ದ ಎಚ್ಚರಿಸಿದೆ. ಯಾರೋ ಪೇಟೆಯವರು, ಪ್ಯಾಂಟು ಶರ್ಟು ಹಾಕಿದವರು... ಕೈಯಲ್ಲಿ ಬರೆದುಕೊಳ್ಳಲು ಪುಸ್ತಕ, ಜತೆಗೆ ನಿಂತಿದ್ದ ತೋಟದ ಮಾಲಿಕ. ಅದಾಗಿ ವಾರವಾಗಿರಬೇಕು. ಅದೇ ಜಾಗದಲ್ಲಿ ಎಂಟು ಹತ್ತು ಜನರು ಓಡಾಡುತ್ತಾ ಯಂತ್ರವೊಂದನ್ನು ನದಿಗಿಂತ ಎತ್ತರದ ದಿಣ್ಣೆಯಲ್ಲಿ ಕೂರಿಸಿದ್ದರೆ, ಯಂತ್ರದಿಂದ ಆನೆ ಸೊಂಡಿಲಿನಂತ ದೊಡ್ಡ, ದಪ್ಪ ಉದ್ದದ ವಸ್ತುವೊಂದು ಹೊಳೆಗಿಳಿಯಿತು. ಮಧ್ಯಾಹ್ನದ ಹೊತ್ತಿಗೆ ಇಡೀ ನೆಲವೇ ಅದುರುವ ಶಬ್ದ. ಜತೆಗೆ ನದಿಯ, ಆಕ್ರಂದನ, ಕಿರುಚಾಟ. ಅದಕ್ಕೆ ತನ್ನ ದೇಹದಿಂದ ರಕ್ತವನ್ನೇ ಬಸಿಯುವಂತಹ ನೋವು. ಆ ಪಂಪುಸೆಟ್ಟು ಸಣ್ಣ ತೋಡಿನಷ್ಟು ನೀರನ್ನು ಹೊಳೆಯಿಂದ ಎತ್ತಿ ಆ ಧನಿಕನ ತೋಟದ ದಿಕ್ಕಿನ ಕಣಿಗೆ ಹರಿಸುತ್ತಿತ್ತು. ಚೋಂಗನಿಗೆ ಇದೆಲ್ಲ ವಿಚಿತ್ರ. ಆತನ ಹಿರಿಯರು ಎಂದೂ ಕೇಳಿರದ ನೋಡಿರದ ರಕ್ಕಸ ಯಂತ್ರವದು. ಅದು ನೀರನ್ನು ಎಳೆಯುವಷ್ಟೂ ಸಮಯ ನದಿ ಭೀಕರವಾಗಿ ರೋದಿಸುತ್ತಿತ್ತು. ಆ ನದಿಗೆ ತನ್ನ ಜೀವಿತದ ಲಕ್ಷಾಂತರ ವರ್ಷಗಳಲ್ಲಿ ಈ ಬಗೆಯದು ಮೊದಲ ಅನುಭವ, ನೋವು. ಅದರ ಕೂಗು ಬೆಟ್ಟ ಗುಡ್ಡಗಳ ಹಾದು ಕಣಿವೆಗಳಲ್ಲಿ ಮಾರ್ದನಿಸಿದರೂ ಯಾರಿಗೂ ಕೇಳದು. ಚೋಂಗನಿಗೆ ಮಾತ್ರ ಆ ನೋವು ಸಂಕಟಗಳು ಕೇಳಿಸಿ, ಅವನ ಕಣ್ಣುಗಳು ತೇವವಾಗುತ್ತಿದ್ದವು. ದಿನಗಳು ಉರುಳುತ್ತಿದ್ದಂತೆ ಮತ್ತಷ್ಟು ಯಂತ್ರಗಳೂ... ಸೊರಗುತ್ತಿದ್ದ ನದಿ... ಎಲ್ಲವನ್ನೂ ನೋಡುತ್ತಾ ಚೋಂಗ ಮತ್ತಷ್ಟು ಮೌನವಾಗಿದ್ದ.

ಚೋಂಗನ ಈ ಮಾತುಗಳು ಅನುಭವಗಳನ್ನು ಅಲ್ಲಿದ್ದವರು ಕಿವಿ ನಿಮಿರಿಸಿ ಕೇಳುತ್ತಿದ್ದಾರೆ. ಅಲ್ಪ ಸ್ವಲ್ಪ ಕುವೆಂಪು, ಕಾರಂತ ಓದಿಕೊಂಡವರಿಗೆ ಯಾವುದೋ ಪುರಾತನ ಜಗತ್ತಿಗೆ ಪಯಣಿಸಿದಂತೆ ಅನಿಸಿದರೆ ಟೀವಿ ಆ್ಯಂಕರ್ ಜಾಹ್ನವಿಯ ಮುಖ ಮೂಗು ಮೂತಿ ಕೆಂಪಾಗಿತ್ತು. ಅವಳಿಗೆ ಅರಿವಿಲ್ಲದೆ ಕಣ್ಣೆವೆಗಳಿಂದ ಕಣ್ಣೀರು ಜಾರುತ್ತಿತ್ತು.

ಸಂದರ್ಶನ ಕೋಣೆಯೊಳಗಿನ ಆಗುಹೋಗುಗಳು ದೇಶದಾದ್ಯಂತ ನೇರ ಪ್ರಸಾರವಾಗುತ್ತಿದ್ದು, ಮನೆಗಳಲ್ಲಿ ಮಕ್ಕಳು ಹಿರಿಯರು ವೀಕ್ಷಿಸುತ್ತಿದ್ದ ಆ ಕಾರ್ಯಕ್ರಮ ಜನರನ್ನು ಕುಳಿತಲ್ಲಿಂದ ಮಿಸುಕಾಡದಂತೆ ಬಿಗಿ ಹಿಡಿದು ಕುಳ್ಳಿರಿಸಿದೆ. ಅನೇಕ ಹಿರಿಯರ ಮನದಲ್ಲಿ "ಎಂಥ ಕಾಲ ಕಳೆದುಹೋಯ್ತು" ಎಂಬ ದೀರ್ಘ ನಿಟ್ಟುಸಿರು.

ಕಾಲ ಬದಲಾಗುತ್ತಿದೆ. ಮುಳಿ ಹುಲ್ಲಿನ ಅಡಿಕೆಗರಿಗಳ ಮನೆಗಳು ಬಹುಬೇಗನೆ ಕಾಣೆಯಾಗಿವೆ. ಆ ಸ್ಥಳಗಳಿಗೆ ಹಂಚಿನ ಮನೆಗಳು ಬಂದು ಈಗ ಅವುಗಳನ್ನು ಕಾಂಕ್ರಿಟ್ ಕಟ್ಟಡಗಳು ಆಕ್ರಮಿಸಿವೆ. ತನ್ನ ದೀರ್ಘ ಜೀವನದ ಪಯಣದಲ್ಲಿ ಚೋಂಗ ಅದನ್ನು ಗಮನಿಸಿದ್ದ. ಊರ ಹೊರಗೆ ಹಾದು ಹೋಗುತ್ತಿದ್ದ ರಸ್ತೆ ಮತ್ತಷ್ಟು ಉಬ್ಬಿ ಅಗಲವಾಗುತ್ತಾ ದಿನಗಳು ಉರುಳುತ್ತಿದ್ದಂತೆ ನಿತ್ಯ ಅದರ ಮೇಲೆ ನೂರಾರು ವಾಹನಗಳು ಚಲಿಸುತ್ತಿವೆ. ಮುಖ್ಯ ರಸ್ತೆಯನ್ನು ಸೇರಲು ಊರೊಳಕ್ಕೂ ಹತ್ತಾರು ರಸ್ತೆಗಳನ್ನು ನಿರ್ಮಿಸಲಾಗಿದೆ. ಅದಕ್ಕಾಗಿ ಬೆಟ್ಟ ಗುಡ್ಡಗಳ ಇಳಿಜಾರಿನಲ್ಲಿದ್ದ ಕಲ್ಲು ಬಂಡೆಗಳನ್ನು ಸೀಳುತ್ತಿದ್ದು ನಿತ್ಯವೂ ಅಲ್ಲಿ ಸ್ಫೋಟಗಳು, ಹಗಲು ರಾತ್ರಿ ಎನ್ನದೆ ಯಂತ್ರಗಳ ಶಬ್ದ. ಜತೆಗೆ ಮನೆ ಮನೆಗಳಲ್ಲಿ ಕೋವಿಗಳು, ಹುಚ್ಚು ಬೇಟೆ. ತನ್ನ ಮನೆಯ ಸುತ್ತ ಮುತ್ತ ಕಂಡು ಬರುತ್ತಿದ್ದ ಚಿಕ್ಕ ಪುಟ್ಟ ಪ್ರಾಣಿ ಪಕ್ಷಿಗಳು ನಿಧಾನದಲ್ಲಿ ಇನ್ನಿಲ್ಲವಾಗಿವೆ. ಬೆಳದಿಂಗಳಿಗೆ ಆ ನದಿಯ ಮರಳ ದಂಡೆಯ ಮೇಲೆ ಮಲಗಿ ಆಕಾಶದ ನಕ್ಷತ್ರಗಳ ನೋಡುತ್ತಾ, ನೋಯುತ್ತಿತ್ತು ಆ ಹಿರಿಯ ಹೃದಯ.

ಆ ದಂಡೆಯ ಮೇಲೆ ಕುಳಿತು ಎಷ್ಟೋ ವರ್ಷ ಗಾಳ ಹಾಕುತ್ತಾ ಓಡಾಡುತ್ತಿದ್ದೆ. ಮೀನುಗಳ ಕೆಲವೇ ಕ್ಷಣದಲ್ಲಿ ಹಿಡಿಯುತ್ತಿದ್ದೆ. ಈಗ ದಿನವಿಡೀ ಕುಳಿತರು ಒಂದೂ ಮೀನು ಸಿಗದು. ಅವೆಲ್ಲ ಎಲ್ಲಿ ಹೋದವೋ ಯಾರಿಗೆ ಗೊತ್ತು?

ಅದೊಂದು ಮಧ್ಯಾಹ್ನದ ಹೊತ್ತು. ದಣಿವಾರಿಸಲು ಚೋಂಗ ಗುಡಿಸಲಲ್ಲಿ ಮಲಗಿದ್ದ. ಇದ್ದಕ್ಕಿದ್ದಂತೆ ಮನೆಯೇ ಕುಸಿದಂತೆ ನೆಲವೇ ಗುಡುಗಿದ ಶಬ್ದ. ಹೊರಗೋಡಿ ಬಂದರೆ ಎದುರಿಗೆ ಹೊಳೆಯ ನೀರಲ್ಲಿ ಯಾರೋ ಮುಳುಗೇಳುತ್ತಿದ್ದರು. ನೀರೊಳಗೆ ಧುಮುಕಿ ಮುಳುಗಿ ಮೇಲೆ ಬರುತ್ತಾ ಅವರ ಕೈಗಳಲ್ಲಿ ದೊಡ್ಡ ದೊಡ್ಡ ಮೀನುಗಳು. ಹತ್ತಿರ ಹೋಗಿ ನೋಡಿದರೆ ಆ ನೀರ ಗುಂಡಿಯ ಇಕ್ಕೆಲಗಳಲ್ಲಿ ದೊಡ್ಡ ಮೀನುಗಳೊಂದಿಗೆ ಅಸಂಖ್ಯ ಮರಿ ಮೀನುಗಳು ಸತ್ತುಬಿದ್ದಿದ್ದವು. ಕೆಲ ಮೀನುಗಳು ನೀರೊಳಗಿನ ಶಬ್ದಕ್ಕೆ ಈಗಲೂ ಸುಯ್ಯನೆ ಮೇಲೇಳುತ್ತಿರುವುದು ಅವನಿಗೇ ಆಶ್ಚರ್ಯ. ಇದೇನಿದು? ಅಲ್ಲಿದ್ದವರು ವಿಚಾರಿಸಿದರೆ ಅವರ ಭಾಷೆಯು ಇವನಿಗೆ ಸರಿಯಾಗಿ ಅರ್ಥವಾಗದು. ಅವರಾರೋ ಹೊರಗಿನವರು. ಅವನಿಗೆ ಅರ್ಥವಾದುದಿಷ್ಟೆ. ರಸ್ತೆ ನಿರ್ಮಾಣಕ್ಕೆ ಬಳಸಲು ಜಲ್ಲಿಗಾಗಿ ದೊಡ್ಡ ದೊಡ್ಡ ಬಂಡೆಗಳನ್ನು ಒಡೆಯಲು ಸ್ಫೋಟಕಗಳನ್ನು ಉಪಯೋಗಿಸುತ್ತಿದ್ದಾರೆ. ಅದನ್ನೇ ಅವರು ನೀರೊಳಗೆ ಸಿಡಿಸಿ ಮೀನು ಹಿಡಿದಿದ್ದಾರೆ.